ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 18-07-2017

# ಪತ್ರಿಕಾ ಆಮಂತ್ರಣ

1. ಕೇಂದ್ರ ಲೋಕಸೇವಾ ಆಯೋಗದ 2016ನೇ ವರ್ಷದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆದ ಪ್ರತಿಭಾವಂತ ಕನ್ನಡಿಗರಿಗೆ ಅಭಿನಂದನಾ ಸಮಾರಂಭ.

ಅಭಿನಂದಿಸುವವರು:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ:
ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಹಾಗೂ ಹಜ್ ಸಚಿವರು,

ದಿನಾಂಕ: 19-07-2017, ಬುಧವಾರ, ಸಮಯ : ಬೆಳಿಗ್ಗೆ 10.00 ಗಂಟೆಗೆ.
ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್ ರಸ್ತೆ, ಬೆಂಗಳೂರು.

2. ಡಾ. ಬಿ.ಆರ್. ಅಂಬೇಡ್ಕರ್ ವಿಚಾರಗಳ ಚಿಂತನ-ಮಂಥನ ಎರಡು ದಿನಗಳ ಕಮ್ಮಟ (19-07-2017 ಮತ್ತು 20-07-2017).

<u>ಆಶಯ:</u>

ಡಾ. ಸಿ.ಎಸ್. ದ್ವಾರಕಾನಾಥ್, ಕಮ್ಮಟದ ನಿರ್ದೇಶಕರು,

**<u>ಗೌರವ ಉಪಸ್ಥಿತಿ:</u>**

ಎಸ್. ಮರಿಸ್ವಾಮಿ, ಅಧ್ಯಕ್ಷರು, ಸ್ಫೂರ್ತಿಧಾಮ,

<u>ಪ್ರಾಸ್ತಾವಿಕ</u> :

ಅಶೋಕ್ ಎನ್. ಚಲವಾದಿ, ಆಡಳಿತಾಧಿಕಾರಿಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ.

ದಿನಾಂಕ: 19-07-2017, ಬುಧವಾರ, ಸಮಯ : ಬೆಳಿಗ್ಗೆ 10.00 ಗಂಟೆಗೆ.
ಸ್ಥಳ: ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ, ಬೆಂಗಳೂರು – 560 091.

## ಪತ್ರಿಕಾ ಪ್ರಕಟಣೆ

## ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಕೊಳಗೇರಿ ಕಿರಿಯ ಅಭಿಯಂತರರು (ಸಿವಿಲ್) 08+01 (ಹೈ.ಕ) ಮತ್ತು ಕೃಷಿ ಮಾರಾಟ ಇಲಾಖೆಯಲ್ಲಿ ಕಿರಿಯ ಅಭಿಯಂತರರು (ಸಿವಿಲ್) 02 ಹುದ್ದೆಗಳಿಗೆ ಆಯೋಗ ಅಂತರ್ಜಾಲದಲ್ಲಿ ಜುಲೈ 15 ರಂದು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆ ಸಲ್ಲಿಸಲು ಅವಕಾಶ

ಬೆಂಗಳೂರು, ಜುಲೈ 17 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 15–03–2017 ರ ಅಧಿಸೂಚನೆ ಮತ್ತು ದಿನಾಂಕ: 15–04–2017 ರ ಸೇರ್ಪಡೆ ಅಧಿಸೂಚನೆಗಳಲ್ಲಿ ಅಧಿಸೂಚಿಸಲಾದ ಹುದ್ದೆಗಳಲ್ಲಿ ಪದವಿ ಪೂರ್ವ ವಿದ್ಯಾರ್ಹತೆ ಹೊಂದಿರುವ ಎಲ್ಲಾ ತಾಂತ್ರಿಕೇತರ ಗ್ರೂಪ್ 'ಸಿ' ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ: 11–06–2017 ರಂದು ನಡೆಸಲಾಗಿರುತ್ತದೆ. ಸದರಿ ಪರೀಕ್ಷೆಯ ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲದಲ್ಲಿ "http://kpsc.kar.nic.in/key answers" ನಲ್ಲಿ ದಿನಾಂಕ: 17–07–2017 ರಂದು ಪ್ರಕಟಿಸಿದೆ.

ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಪ್ರತಿ ಪ್ರಶ್ನೆಗೆ ರೂ 50/– ಗಳ ಐಪಿಒ/ಡಿಡಿ ಶುಲ್ಕವನ್ನು ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ. ಬೆಂಗಳೂರು – 560 001 ಇವರ ಹೆಸರಿಗೆ ಸಂದಾಯವಾಗುವಂತೆ ಪಡೆದು ಅದರೊಂದಿಗೆ ಸರಿಯಾದ ಕೀ ಉತ್ತರಗಳನ್ನು ಪುಷ್ಟೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ಪ್ರಕಾಶನದ ಪ್ರತಿ, ವಿಷಯ ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುವ ನಮೂನೆಯಲ್ಲಿ ಭರ್ತಿಮಾಡಿ ಅಗತ್ಯ ದಾಖಲೆಗಳೊಂದಿಗೆ ದ್ವಿಪ್ರತಿಗಳಲ್ಲಿ ಕೀ ಉತ್ತರಗಳನ್ನು ಪ್ರಕಟಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಆಯೋಗಕ್ಕೆ ತಲುಪುವಂತೆ ಸಲ್ಲಿಸತಕ್ಕದ್ದು. ಶುಲ್ಕ ಸಂದಾಯ ಮಾಡದ ಹಾಗೂ ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಎಲೆಕ್ಟ್ರಿಕಲ್ಸ್ ತರಬೇತಿ ಶಿಬಿರ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಕ/ಯುವತಿಯರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ **"ಎಲೆಕ್ಟ್ರಿಕಲ್ಸ್"** ತರಬೇತಿ ಶಿಬಿರವನ್ನು ದಿನಾಂಕ 07.08.2017ರಿಂದ 18.08.2017ರವರೆಗೆ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿದೆ.

ಈ ತರಬೇತಿ ಶಿಬಿರವು 12 ದಿನಗಳ ಕಾಲ ನಡೆಯುತ್ತದೆ. ತರಬೇತಿಯು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ನಡೆಯುತ್ತದೆ. ತರಬೇತಿ ಶಿಬಿರದಲ್ಲಿ ಭಾಗವಹಿಸುವ ಯುವಕ/ಯುವತಿಯರಿಗೆ ಲಘು ಉಪಹಾರ ಒದಗಿಸಲಾಗುವುದು. ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ನೀಡಲಾಗುವುದಿಲ್ಲ.

ವಯೋಮಾನ 15 ರಿಂದ 35 ವರ್ಷದೊಳಗಿನ ಯುವಕ/ಯುವತಿಯರು ಮಾತ್ರ ಭಾಗವಹಿಸಲು ಅರ್ಹರು. ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಶಿಕ್ಷಣ (ಪಾಸ್/ಫೇಲ್) ಹೊಂದಿರಬೇಕು. ರೂ. 100.00ಗಳ ನೊಂದಣಿ ಶುಲ್ಕವಿರುತ್ತದೆ. ಈ ತರಬೇತಿಯನ್ನು 40 ಜನ ಯುವಕ/ಯುವತಿಯರಿಗೆ ಮಾತ್ರ ನಡೆಸಲಾಗುವುದು. ಹೊರ ಜಿಲ್ಲೆಗಳಿಂದ ಆಗಮಿಸುವ ಶಿಬಿರಾರ್ಥಿಗಳಿಗೆ ಸಾಮಾನ್ಯ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು.

ಆಸಕ್ತ ಯುವತಿಯರು ತಮ್ಮ ಜನ್ಮ ದಿನಾಂಕದ ದಾಖಲೆಯೊಂದಿಗೆ (ಎಸ್.ಎಸ್.ಎಲ್.ಸಿ. ಅಂಕಪಟ್ಟಿ) ಈ ಕೆಳಕಂಡ ವಿಳಾಸದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಪ್ರಕಟಣೆ ತಿಳಿಸಿದೆ. ಸಹಾಯಕ ನಿರ್ದೇಶಕರು, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–01. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: **080–22214911/9482093401** ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.

## ಪ್ರತಿಭಾವಂತ ಕನ್ನಡಿಗರಿಗೆ ಅಭಿನಂದನಾ ಸಮಾರಂಭ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗದ 2016ನೇ ವರ್ಷದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಪಡೆದ ಪ್ರತಿಭಾವಂತ ಕನ್ನಡಿಗರಿಗೆ ಜುಲೈ 19 ರಂದು ಬೆಳಿಗ್ಗೆ 10.00 ಗಂಟೆಗೆ ನಗರದ ಕುಮಾರ್ ಪಾರ್ಕ್ ರಸ್ತೆಯಲ್ಲಿರುವ ಗಾಂಧಿಭವನದಲ್ಲಿ "ಅಭಿನಂದನಾ ಸಮಾರಂಭ" ವನ್ನು ಹಮ್ಮಿಕೊಂಡಿದೆ.

ಈ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉನ್ನತ ಶ್ರೇಣಿ ಪಡೆದ ಪ್ರತಿಭಾವಂತ ಕನ್ನಡಿಗರಿಗೆ ಅಭಿನಂದಿಸಲಿದ್ದಾರೆ. ಸಮಾರಂಭ ಅಧ್ಯಕ್ಷತೆಯನ್ನು ನಗರಾಭಿವೃದ್ಧಿ ಹಾಗೂ ಹಜ್ ಸಚಿವ ರೋಷನ್ ಬೇಗ್ ಅವರು ವಹಿಸಲಿದ್ದಾರೆ.

ಕಾನೂನು, ಸಂಸದೀಯ ಮತ್ತು ಸಣ್ಣ ನೀರಾವರಿ ಸಚಿವ ಟಿ.ಬಿ. ಜಯಚಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ, ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವ ಕೆ.ಜೆ. ಜಾರ್ಜ್ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

## ವರ್ಷಾಂತ್ಯದೊಳಗೆ ದಾವಣಗೆರೆಯಲ್ಲಿ
## ಮೂರನೇ ವಿಶ್ವ ಕನ್ನಡ ಸಮ್ಮೇಳನ

**ಬೆಂಗಳೂರು, ಜುಲೈ 18 ( ಕರ್ನಾಟಕ ವಾರ್ತೆ) :**

ವರ್ಷಾಂತ್ಯದೊಳಗೆ ದಾವಣಗೆರೆಯಲ್ಲಿ ಮೂರನೇ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ನಾಡಿನ ಗಣ್ಯರು, ಹಿರಿಯ ಸಾಹಿತಿಗಳು ಹಾಗೂ ಕಲಾವಿದರ ಸಭೆಯಲ್ಲಿ ಒಮ್ಮತದ ಅಭಿಪ್ರಾಯ ಹೊರಹೊಮ್ಮಿತು.

ರಾಜ್ಯದಲ್ಲಿನ ಬರ ಪರಿಸ್ಥಿತಿಗೂ ಹಾಗೂ ವಿಶ್ವ ಕನ್ನಡ ಸಮ್ಮೇಳನ ಆಯೋಜನೆಗೂ ಅನಗತ್ಯವಾಗಿ ಸಂಬಂಧ ಕಲ್ಪಿಸಬಾರದು ಎಂಬುದು ಬಹುತೇಕ ವ್ಯಕ್ತಿಗಳ ಅನಿಸಿಕೆಯಾಗಿತ್ತು. ಅಲ್ಲದೆ, ಕನ್ನಡದ ತಿಂಗಳು ಎಂದೇ ಗುರುತಿಸಲ್ಪಡುವ ನವೆಂಬರ್‌ನಲ್ಲೇ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಬೇಕು ಎಂದು ಹಲವರು ಸಲಹೆ ನೀಡಿದರು. ಸಭೆಯ ಅಂತ್ಯದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಸೆಂಬರ್ ಮೊದಲನೇ ಅಥವಾ ಎರಡನೇ ವಾರದಲ್ಲಿ ದಾವಣಗೆರೆಯಲ್ಲಿ ಮೂರನೇ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲಾಗುವುದು ಎಂದು ಹರ್ಷೋದ್ಗಾರಗಳ ನಡುವೆ ಪ್ರಕಟಿಸಿದರು.

ವಾರದೊಳಗೆ ಸಾಂಸ್ಕೃತಿಕ ನೀತಿ ಜಾರಿ – ಅಕಾಡೆಮಿಗಳಿಗೆ ನೇಮಕ

ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸುವ ಮುನ್ನ, ರಾಜ್ಯದ ಸಾಂಸ್ಕೃತಿಕ ನೀತಿಯನ್ನು ಜಾರಿಗೊಳಿಸಬೇಕು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯ ವಿವಿಧ ಅಕಾಡೆಮಿಗಳಲ್ಲಿ ಖಾಲಿ ಇರುವ ಅಧ್ಯಕ್ಷ ಹಾಗೂ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡಬೇಕು ಎಂಬ ಹಿರಿಯ ಸಾಹಿತಿ ಕೆ. ವೈ. ನಾರಾಯಣ ಸ್ವಾಮಿ ಅವರ ಸಲಹೆಗೆ ಸ್ಪಂದಿಸಿದ ಸಿದ್ದರಾಮಯ್ಯ ಅವರು ಇನ್ನು ವಾರದೊಳಗೆ ಸಾಂಸ್ಕೃತಿಕ ನೀತಿಯನ್ನು ಜಾರಿಗೊಳಿಸಲಾಗುವುದು. ಅಲ್ಲದೆ, ವಿವಿಧ ಅಕಾಡೆಮಿಗಳಲ್ಲಿ ಖಾಲಿ ಇರುವ ಅಧ್ಯಕ್ಷ ಹಾಗೂ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದರು.

ಸಧ್ಯದಲ್ಲೇ ಬರ–ಪೀಡಿತ ಪ್ರದೇಶಗಳ ಹೆಸರು–ವಿವರಗಳ ಘೋಷಣೆ

ರಾಜ್ಯದ 176 ತಾಲ್ಲೂಕುಗಳು ಕಳೆದ ವರ್ಷ ಮುಂಗಾರು ವೈಫಲ್ಯದಿಂದಾಗಿ 139 ತಾಲ್ಲುಕುಗಳನ್ನು ಹಾಗೂ ಹಿಂಗಾರು ವೈಫಲ್ಯದ ಹಿನ್ನೆಲೆಯಲ್ಲಿ 160 ತಾಲ್ಲೂಕುಗಳನ್ನು ಬರ–ಪೀಡಿತ ಎಂದು ಘೋಷಿಸಲಾಗಿತ್ತು. ಈ ವರ್ಷ ಜುಲೈ ತಿಂಗಳಲ್ಲಿ ಅರ್ಧ ಭಾಗವೇ ಕಳೆದರೂ ವರುಣ ಕೃಪೆ ತೋರಿಲ್ಲ. ಜಲಾಶಯಗಳಲ್ಲಿ ನೀರಿಲ್ಲ ! ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ಕಳೆದ ವರ್ಷ ಈ ಅವಧಿಯಲ್ಲಿ 84 ಟಿ ಎಂ ಸಿ ನೀರು ಸಂಗ್ರಹವಾಗಿತ್ತು. ಆದರೆ, ಈ ಬಾರಿ ಅರ್ಧಕ್ಕಿಂತಲೂ ಕಡಿಮೆ ಅಂದರೆ ಕೇವಲ 40 ಟಿ ಎಂ ಸಿ ಯಷ್ಟು ನೀರು ಸಂಗ್ರಹಣೆ ಇದೆ. ಪರಿಸ್ಥಿತಿಯ ವಸ್ತು ಸ್ಥಿತಿಯನ್ನು ಅವಲೋಕಿಸುತ್ತಿರುವ ರಾಜ್ಯ ಸರ್ಕಾರ ಸಧ್ಯದಲ್ಲೇ ಬರ–ಪೀಡಿತ ಪ್ರದೇಶಗಳ ಹೆಸರು–ವಿವರಗಳನ್ನು ಘೋಷಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಸಮ್ಮೇಳನದಲ್ಲಿ ಸಂಭ್ರಮ ಇಲ್ಲದಿದ್ದರೂ, ಕನ್ನಡದ ಕಂಪು ಖಚಿತ !

ಪ್ರಸಕ್ತ ಸಾಲಿನ ಮುಂಗಾರಿನಲ್ಲಿ ರಾಜ್ಯದಲ್ಲಿ ವಾಡಿಕೆ ಮಳೆಗಿಂತಲೂ ಶೇಕಡಾ 24 ರಷ್ಟು ಮಳೆಯ ಕೊರತೆ ಉಂಟಾಗಿದೆ. ರಾಜ್ಯದಲ್ಲಿ ಈ ವೇಳೆಗಾಗಲೇ 73 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಬೇಕಿತ್ತು. ಆದರೆ, ಇದೀಗ 28 ಲಕ್ಷ ಹೆಕ್ಟೇರ್ ಪ್ರದೇಶಲ್ಲಿ ಮಾತ್ರ ಬಿತ್ತನೆಯಾಗಿದೆ. ಇಂತಹ ಸನ್ನಿವೇಶದಲ್ಲಿ ವಿಶ್ವ ಕ್ನನಡ ಸಮ್ಮೇಳನದಲ್ಲಿ ಸಂಭ್ರಮವನ್ನು ತೋರ್ಪಡಿಸಲಾಗದಿದ್ದರೂ ಕನ್ನಡದ ಕಂಪನ್ನು ಹೊರಸೂಸುವ ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಖಚಿತವಾಗಿ ಮಾಡಲಿದೆ ಎಂದು ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಪ್ರಮುಖರು ಹೇಳಿದ್ದೇನು ?

ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಷೆ, ನಾಡು, ನುಡಿ ಮತ್ತು ಗಡಿ ಸುದ್ದಿಯಾಗಬೇಕು. ಅದು ಕೇವಲ ಕನ್ನಡದ ಜಾತ್ರೆ ಮಾತ್ರವಲ್ಲ, ಕನ್ನಡದ ಜಾಗೃತಿಯಾಗಬೇಕು ಎಂದು ಮುಖ್ಯಮಂತ್ರಿ ಚಂದ್ರು ಹೇಳಿದರು.

ರಾಜ್ಯವು ಬರದ ಛಾಯೆಯಲ್ಲಿರುವಾಗ ಸಾರಸ್ವತ ಲೋಕದಲ್ಲಿರುವ ಜನರು ಸೂಕ್ಷ್ಮತೆ ಹಾಗೂ ಸಂವೇದನಾಶೀಲತೆಯನ್ನು ಕಳೆದುಕೊಳ್ಳಬಾರದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್ ಜಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಿಶ್ವ ಕನ್ನಡ ಸಮ್ಮೇಳನದಲ್ಲಿ ಸಾಂಸ್ಕೃತಿಕ ಉತ್ಸವ ಆಯೋಜಿಸಿರುವ ಜೊತೆಗೆ ನಾಡಿನ ಇತಿಹಾಸ ಬಿಂಬಿಸುವ ವಸ್ತು ಪ್ರದರ್ಶನವನ್ನೂ ಆಯೋಜಿಸಬೇಕು ಎಂಬುದು ಹೆಸರಾಂತ ಕವಿ ಹೆಚ್ ಎಸ್ ವೆಂಕಟೇಶ ಮೂರ್ತಿ ಅವರ ಅನಿಸಿಕೆಯಾಗಿತ್ತು.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಅಪಾಯದ ಅಂಚಿನತ್ತ ಹೊರಳುತ್ತಿದೆ. ಇದೀಗ ಕನ್ನಡ ಭಾಷೆಯು ಆಡು ಭಾಷೆಯಾಗಿ ಮಾತ್ರ ಉಳಿದಿದೆ.

ಆದರೆ, ಓದುವ ಹಾಗೂ ಬರೆಯುವ ಭಾಷೆಯಾಗಿ ಕ್ಷೀಣಿಸುತ್ತಿದೆ. ಕನ್ನಡ ಭಾಷೆಯು ಒಂದು ಸೌಂದರ್ಯದ ಭಾಷೆಯಾಗಿ ಹಾಗೂ ಘನತೆಯ ಭಾಷೆಯಾಗಿ ಉಳಿಯಬೇಕಾದರೆ, ಕನ್ನಡ ಭಾಷೆಗೆ ಡಿಜಿಟಲ್ ಸ್ವರೂಪ ಪಡೆಯಬೇಕು ಎಂದು ಕಿರುತೆರೆ ಹಾಗೂ ಹಿರಿತೆರೆಯ ನಿರ್ದೇಶಕ ಹಾಗೂ ನಟ ಟಿ. ಎನ್. ಸೀತಾರಾಂ ಅವರು ತಿಳಿಸಿದರು.

ಮೊದಲನೇ ವಿಶ್ವ ಕನ್ನಡ ಸಮ್ಮೇಳನ ನಡೆದದ್ದು 1985 ರಲ್ಲಿ. ಎರಡನೇ ವಿಶ್ವ ಕನ್ನಡ ಸಮ್ಮೇಳನ ನಡೆದದ್ದು 2011 ರಲ್ಲಿ. ಅಂದರೆ 26 ವರ್ಷಗಳ ನಂತರ ! ಆದರೆ, ಮೂರನೇ ವಿಶ್ವ ಕನ್ನಡ ಸಮ್ಮೇಳನವು 2017 ರಲ್ಲಿ ಅಂದರೆ ಕೇವಲ ಆರು ವರ್ಷಗಳ ಅವಧಿಯಲ್ಲಿ ನಡೆಸಲು ಅವಸರವೇಕೆ ? ತುರ್ತು ಅಗತ್ಯ – ಅನಿವಾರ್ಯತೆ ಏಕೆ ? ಎಂದು ಸಭೆಯಲ್ಲಿ ಪ್ರಶ್ನೆ ಎತ್ತಿದವರು ಚಂದ್ರಶೇಖರ ಪಾಟೀಲ್ (ಚಂಪಾ). ವಿಶ್ವ ಕನ್ನಡ ಸಮ್ಮೇಳನದ ಪರಿಕಲ್ಪನೆ ದೊಡ್ಡದು. ಅದು ಮನೆ ಹಬ್ಬವಲ್ಲ. ಊರಹಬ್ಬದಂತೆ ! ಬರದ ಹಿನ್ನೆಲೆಯಲ್ಲಿ ಹಾಡುವ ಸಭೆಯಲ್ಲಿ ನರಳುವುದುಂಟೇ ? ಎಂಬ ವರ ಕವಿ ದ. ರಾ. ಬೇಂದ್ರೆ ಅವರ ಕವನದ ಸಾಲುಗಳನ್ನು ಚಂಪಾ ಉಲ್ಲೇಖಿಸಿದರು.

ಮೊದಲನೇ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟಕರು ಪೂರ್ವ ಪ್ರಾಥಮಿಕ ಶಾಲೆಯಿಂದ ಸ್ನಾತಕ ಪದವಿಯವರೆಗೆ ಕನ್ನಡ ಭಾಷೆಯಲ್ಲಿ ವ್ಯಾಸಂಗ ಮಾಡಬೇಕು ಎಂದು ಬಯಸಿದರೆ, ಎರಡನೇ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟಕರು ಅದಕ್ಕೆ ತದ್ವಿರುದ್ಧ ಹೇಳಿಕೆ ನೀಡಿ ಆಂಗ್ಲ ಭಾಷೆಯನ್ನು ಬೆಂಬಲಿಸಿ ಕಾರ್ಪೋರೇಟ್ ಸಂಸ್ಕೃತಿಗೆ ಪ್ರೋತ್ಸಾಹಿಸಿದರು ಎಂದು ಚಂಪಾ ದೂರಿದರು.

ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಷಾ ಹಾಗೂ ಕೋಮು ಸಾಮರಸ್ಯಕ್ಕೆ ಆದ್ಯತೆ ದೊರೆಯಬೇಕೆಂದು ಹಿರಿಯ ಸಾಹಿತಿ ಡಾ ಕೆ ಮರುಳ ಸಿದ್ದಪ್ಪ ಅವರು ಸಲಹೆ ನೀಡಿದರು. ಅಂತೆಯೇ, ಕನ್ನಡಕ್ಕೆ ಹೊಸ ತಂತ್ರಾಂಶ (ಸಾಫ್ಟ್‌ವೇರ್) ರೂಪಿಸಬೇಕೆಂದು ಸಾಹಿತಿ ಭಾನು ಮುಷ್ತಾಕ್ ಅವರು ಅಭಿಪ್ರಾಯಪಟ್ಟರು.

ಹೆಸರಾಂತ ಚಿಂತಕ ಡಾ ಎಂ. ಚಿದಾನಂದ ಮೂರ್ತಿ ಅವರು ನೇಪಾಳ, ಆಗ್ನೇಯ ಏಷ್ಯಾದ – ಮಲೇಷಿಯಾ ಹಾಗೂ ಇಂಡೋನೇಷ್ಯಾದಲ್ಲಿನ – ಕನ್ನಡಿಗರಿಗೂ ಆತ್ಮೀಯ ಆಮಂತ್ರಣ ವಿಸ್ತರಿಸಬೇಕೆಂದು ಆಗ್ರಹಿಸಿದರು.

ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ನೆನಪುಳಿಯುವಂತಹ ಪ್ರಕಟಣೆಗಳನ್ನು ಹೊರತರಬೇಕು ಎಂದು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ ಮಲ್ಲಿಕಾ ಘಂಟಿ ಅವರು ತಿಳಿಸಿದರು. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ರಾಷ್ಟ್ರದ ವಿವಿಧ ಭಾಷೆಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಮಗ್ರ ಚಿತ್ರಣದ ಸಾಕ್ಷ್ಯಚಿತ್ರ ನಿರ್ಮಾಣ ಮಾಡಿ ಎಲ್ಲೆಡೆ ಪ್ರಸಾರ ಮಾಡುವತ್ತ ಕ್ರಮ ಜರುಗಿಸಬೇಕು ಎಂದು ಹೆಸರಾಂತ ಸಾಹಿತಿ ಪ್ರೊ ಕಮಲಾ ಹಂಪನಾ ಅವರು ಹೇಳಿದರು.

ಸ್ವಾತಂತ್ರ್ಯಾ ನಂತರ ಕನ್ನಡ ನಾಡಿನ ಬೆಳವಣಿಗೆ ಕುರಿತ ಕನ್ನಡ, ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಪ್ರಗತಿ ದರ್ಶನದ ವಸ್ತು ಪ್ರದರ್ಶನವನ್ನು ಆಯೋಜಿಸಬೇಕೆಂದು ಹಿರಿಯ ಪತ್ರಕರ್ತ ಡಾ ಸರಜೂ ಕಾಟ್ಕರ್ ಅವರು ಸಲಹೆಯಿತ್ತರು.

ಹಿಂದಿನ ಸಮ್ಮೇಳನಗಳ ಸಂದರ್ಭದಲ್ಲಿ ನೂರು ಪುಸ್ತಕಗಳನ್ನು ಪ್ರಕಟಿಸಿದರೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಹಿತಿಗಳ ಕೇವಲ ಮೂರು ಪುಸ್ತಕಗಳು ಪ್ರಕಟವಾಗಿವೆ. ಈ ಪರಿಸ್ಥಿತಿ ಈ ಬಾರಿಯಾದರೂ ಬದಲಾಗಬೇಕು ಎಂದು ಕಲಬುರಗಿಯ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕ ಡಾ ಬಸವರಾಜ ಸಬರದ ಅವರು ಅಭಿಪ್ರಾಯಪಟ್ಟರು.

ನಿಜವಾದ ವಿಶ್ವ ಸುಂದರಿ ಐಶ್ವರ್ಯ ರೈ ಅಲ್ಲ ! ಸಾಲು ಮರದ ತಿಮ್ಮಕ್ಕ !! ಸಮ್ಮೇಳನಕ್ಕೆ ಸಾಧಕರನ್ನು ಕರೆಸಿ. ಹೃದಯ ಶಸ್ತ್ರ ಚಿಕಿತ್ಸೆಗಾಗಿ ವಿಶ್ವದ ನಾನಾ ಭಾಗಗಳಿಂದ ಕರ್ನಾಟಕಕ್ಕೆ ಆಗಮಿಸುವವರನ್ನು ಗಮನಿಸಿ. ಅಂತಹ ವೈದ್ಯರನ್ನು ಪುರಸ್ಕರಿಸಿ. ವಿವಿಧ ದೇಶಗಳ ಹೆಸರಾಂತ ಕಂಪನಿಗಳಿಗೆ ಶ್ರಮಿಸುವ ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು ಗೌರವಿಸಿ ಎಂದು ಸಲಹೆಗಳ ಮೇಲೆ ಸಲಹೆಗಳನ್ನಿತ್ತರು.

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ, ವಿಶ್ವ ವಿಜ್ಞಾನಿಯಾಗಿ ಭಾರತ ರತ್ನ ಗೌರವಕ್ಕೆ ಪಾತ್ರರಾಗಿರುವ ಡಾ ಸಿ ಎನ್ ಆರ್ ರಾವ್ ಅವರನ್ನು ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟಕರಾಗಿ ಪರಿಗಣಿಸಲು ಆಲೋಜಿಸಿ. ಇದು ನನ್ನ ಸಲಹೆ. ತೀರ್ಮಾನ ತಮ್ಮದು ಎಂದು ಸುಪ್ರಸಿದ್ಧ ಸಾಹಿತಿ ಡಾ ಹಂಪ ನಾಗರಾಜಯ್ಯ ಅವರು ಸೂಚಿಸಿದರು. ಹೆಸರಾಂತ ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರು ಕುವೆಂಪು ಅವರ ರಚನೆ ಬಾರಿಸು ಕನ್ನಡ ಡಿಂಢಿಮವ ಹಾಡಿ, ಮೌನಕ್ಕೆ ಶರಣಾದರು.

ಕೊಬ್ಬರಿ ಚೀಲದಲ್ಲೂ ಕನ್ನಡದ ಅಕ್ಷರಗಳು ಕಾಣುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರ ಸಮಾಜ ಸೇವಕ ಕಡಿದಾಳು ಶಾಮಣ್ಣ ಅವರು ಇಂತಹ ಪರಿಸ್ಥಿತಿಯಲ್ಲಿ ಆಯೋಜಿಸಲಾಗುತ್ತಿರುವ ವಿಶ್ವ ಕನ್ನಡ ಸಮ್ಮೇಳನದಲ್ಲಿ ಒಂದೆಡೆ ಕೃಷಿ ಮತ್ತು ಕೃಷಿಕ, ಮತ್ತೊಂದೆಡೆ ತಂತ್ರಾಂಶ ಮತ್ತು ತಂತ್ರಜ್ಞಾನಕ್ಕೆ ಆಧ್ಯತೆ ದೊರೆಯಬೇಕು ಎಂದು ಆಶಿಸಿದರು.

ಸಮ್ಮೇಳನವು ಯುವ ಸಮುದಾಯವನ್ನು ಕೇಂದ್ರೀಕರಿಸಬೇಕು ಎಂಬುದು ಲೇಖಕ ಕಾ ತ ಚಿಕ್ಕಣ್ಣ ಅವರ ಅಭಿಪ್ರಾಯವಾಗಿತ್ತು. ಸಮ್ಮೇಳನದ ಆವರಣದಲ್ಲಿ ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಿ, ಸಾಂಸ್ಕೃತಿಕ ನಕ್ಷೆ ರೂಪಿಸಿ ಎಂಬುದು ಸಾಹಿತಿ ದು ಸರಸ್ವತಿ ಅವರ ಅನಿಸಿಕೆಯಾಗಿತ್ತು.

ಈ ಮುನ್ನ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಉಮಾಶ್ರೀ ಅವರು ಎಲ್ಲೆಡೆ ಕನ್ನಡ ಪ್ರಜ್ಞೆ ಜಾಗೃತಿಗೊಳಿಸಿ ಕನ್ನಡತನವನ್ನು ಪಸರಿಸುವ ಕಾಯಕಕ್ಕೆ ಎಲ್ಲರೂ ಒಂದಾಗಬೇಕು ಹಾಗೂ ಮುಂದಾಗಬೇಕು ಎಂದು ಮನವಿ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಉಮಾಶ್ರೀ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕಾ ಸಚಿವ ಎಸ್ ಎಸ್ ಮಲ್ಲಿಕಾರ್ಜುನ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್. ಕೆ. ಪಾಟೀಲ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಖಾತೆಯನ್ನು ನಿರ್ವಹಿಸಿದ ಬಿ. ಟಿ. ಲಲಿತಾ ನಾಯಕ್, ಲೀಲಾದೇವಿ ಆರ್ ಪ್ರಸಾದ್, ರಾಣಿ ಸತೀಶ್, ಗೋವಿಂದ ಎಂ ಕಾರಜೋಳ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್. ಜಿ. ಸಿದ್ದರಾಮಯ್ಯ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಈ ಹಿಂದೆ ಕಾರ್ಯನಿರ್ವಹಿಸಿದ ಡಾ ಎಲ್. ಹನುಮಂತಯ್ಯ, ಡಾ ಮುಖ್ಯಮಂತ್ರಿ ಚಂದ್ರು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಅರೆ ಭಾಷಾ, ಕೊಡವ, ಕೊಂಕಣಿ, ತುಳು ಹಾಗೂ ಬ್ಯಾರಿ ಅಕಾಡೆಮಿಗಳ ಅಧ್ಯಕ್ಷರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ ಸುಭಾಷ್‌ಚಂದ್ರ ಕುಂಟಿಯಾ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಭಿವೃದ್ಧಿ ಆಯುಕ್ತರೂ ಹಾಗೂ ಕೃಷಿ ಉತ್ಪನ್ನ ಆಯುಕ್ತರೂ ಆದ ಟಿ. ಎಂ. ವಿಜಯ ಭಾಸ್ಕರ್, ಲೋಕೋಪಯೋಗಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಮೂರನೇ ವಿಶ್ವ ಕನ್ನಡ ಸಮ್ಮೇಳನದ ನೋಡೆಲ್ ಅಧಿಕಾರಿ ಎಂ. ಲಕ್ಷ್ಮೀನಾರಾಯಣ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಚಕ್ರವರ್ತಿ ಮೋಹನ್ ಅವರೂ ಸೇರಿದಂತೆ ಹಲವು ಗಣ್ಯರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

***********

ಡಿ ಪಿ ಎಂ